ದಿನಾಂಕ 02 ನೇ ಮಾರ್ಚ್ 2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲು : ಪ್ರತಿವಾದಿ ಪರ ವಕೀಲರಿಂದಃ-

ದಾವಾ ಸ್ವೊತ್ತನ್ನು ತಿತಿರಾ ಕುಟುಂಬದಿಂದ ಖರೀದಿಸಿದ್ದೆನು. ನಾನು ಅಸಲು ದಾವೆ 64/2000 ರಲ್ಲಿ ಲಿಖಿತ ತಕರಾರು ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ದಾಖಲಾತಿಯನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ಲಿಖಿತ ತಕಾರರಿನಲ್ಲಿ ಸ.ನಂ. 12/1 ರಲ್ಲಿ 3 ಎಕರೆ ಆಸ್ತಿ ಖರೀದಿಸಿರುವುದಾಗಿ ನಮೂದಿಸಲಾಗಿದೆ ಎಂದರೆ ಅನಂತರ 12/6 ಎಂದು ಬರೆಯಲಾಗಿದೆ ಎನ್ನುತ್ತಾರೆ. 12/6 ಎಂದು ಯಾವಾಗ ಆದೇಶ ಅಯಿತು ಎಂದು ನನಗೆ ಗೊತ್ತಿಲ್ಲ. ನಾನು ಈ ದಾವೆಯಲ್ಲಿ ಪಾರ್ವತಿಯವರ ಪರವಾಗಿ ಜಿ ಪಿ ಎ ಪಡೆದಿದ್ದೇನೆ ಎಂದರೆ ಸರಿಯಲ್ಲ. ನಾನು ಅಸಲು ದಾವೆ 64/2000 ರಲ್ಲಿ ಪಾರ್ವತಿಯವರು ಜಿ.ಪಿ.ಎ ಹಾಜರುಪಡಿಸಿದ್ದೇನೆ ಎಂದರೆ ಸರಿ. ಸದರಿ ದಾಖಲಾತಿಯಲ್ಲಿ ನಿಡಿ 2 ಎಂದು ಗುರುತಿಸಲಾಯಿತು. ನಿಡಿ 2 ರಲ್ಲಿ ಆಸ್ತಿ ಸಂಖ್ಯೆ12/1 ಎಂದು ನಮೂದಿಸಲಾಗಿದೆ ಎಂದರೆ ಸರಿ.

ನಾನು ಅಸಲು ದಾವೆ 64/2000 ರಲ್ಲಿ ಪಹಣಿಯನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿ. ಸದರಿ ದಾಖಲಾತಿಯನ್ನು ನಿಡಿ 3 ಎಂದು ಗುರುತಿಸಲಾಯಿತು. ನಿಡಿ 3 ರಲ್ಲಿ ಆಸ್ತಿ ಸಂಖ್ಯೆ 12/1 ಎಂದು ನಮೂದಿಸಲಾಗಿದೆ ಎಂದರೆ ಸರಿ. ಹುದಿಕೇರಿ ಗ್ರಾಮದ ಸ.ನಂ. 12/6 ರಲ್ಲಿ 3.20 ಎಕರೆ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ಮುದ್ದಯ್ಯನವರಿಂದ ಖರೀದಿಸಿದ ಆಸ್ತಿಯಲ್ಲಿ ಮುದ್ದಯ್ಯನವರ ಬಳಿ ಹೇಳಬೇಕು ಎಂದರೆ ನಾನು ಈಗಾಗಲೇ ಖರೀದಿಸುವ ಅವಶ್ಯಕತೆ ಇರಲಿಲ್ಲ ಎನ್ನುತ್ತಾರೆ.

ಮರು ವಿಚಾರಣೆ ಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿಬೆರಳಚ್ಚು ಮಾಡಿಸಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sdxxx-

(ಸಾಕ್ಷಿಯವರ ಸಹಿ)

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.